ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ – ೮**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೇ ಅಧಿವೇಶನ**

**(ಮುಂದುವರೆದ ಉಪವೇಶನ)**

**ಮಂಗಳವಾರ, ದಿನಾಂಕ: ೨೧ನೇ ಮಾರ್ಚ್, ೨೦೧೬**

---

**ಸಮೂಹ – II**

೧. ಇಂಧನ ಸಚಿವರು

೨. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಕೃಷಿ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು

---

## ಕೊಡಗು ಜಿಲ್ಲೆಯಲ್ಲಿ ಬೆಳೆ ವಿಮೆ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)** –

೧೦೬ (೧೦೩೪) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಇರುವ ರೈತರ ಸಂಖ್ಯೆ ಎಷ್ಟು ; (ಸಣ್ಣ, ಅತೀ ಸಣ್ಣ ಮತ್ತು ದೊಡ್ಡ ರೈತರ ವಿವರಗಳನ್ನು ತಾಲ್ಲೂಕುವಾರು ನೀಡುವುದು)

(ಆ) ಸದರಿ ರೈತರಲ್ಲಿ ಬೆಳೆ ವಿಮೆ ಮಾಡಿಸಿದ ರೈತರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಜಿಲ್ಲೆಯಲ್ಲಿ ಬೆಳೆ ವಿಮೆ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಲಾಗಿತ್ತೇ ; (ಸಂಪೂರ್ಣ ವಿವರ ನೀಡುವುದು)

(ಈ) ಬೆಳೆ ವಿಮೆ ಸೌಲಭ್ಯದಿಂದ, ರೈತರು ಪಡೆದ ಪರಿಹಾರದ ಮೊತ್ತವೆಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ರಾಜ್ಯದ ದನಕರುಗಳಿಗೆ ಬೇಸಿಗೆಯ ಬರಗಾಲದಲ್ಲಿ ಸೂಕ್ತ ಮೇವು ಒದಗಿಸಲು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೦೭ (೯೧೪) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ದನಕರುಗಳ ಸಂಖ್ಯೆ ಎಷ್ಟು ;

(ಆ) ರಾಜ್ಯದ ದನಕರುಗಳಿಗೆ ಮಾರ್ಚ್ ತಿಂಗಳಿಂದ ಜೂನ್ ೨೦೦೭ ರವರೆಗೆ ಬೇಕಾಗುವ ಮೇವಿನ ಅಂದಾಜು ಪ್ರಮಾಣ ಮತ್ತು ಕೊರತೆಯ ಪ್ರಮಾಣವೆಷ್ಟು ; (ವಿವರ ನೀಡುವುದು)

(ಇ) ಈ ಬರಗಾಲದಲ್ಲಿ ದನಕರುಗಳಿಗೆ ಮೇವು ಒದಗಿಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ?

## ರಸ್ತೆ ನಿರ್ವಹಣೆ ಕಾಮಗಾರಿಗಳಲ್ಲಿ ಅವ್ಯವಹಾರ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೮ (೯೩೯) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲೋಕೋಪಯೋಗಿ ಇಲಾಖೆಯ ಲೆಕ್ಕಶೀರ್ಷಿಕೆ ೩೦೫೪ ರಡಿಯಲ್ಲಿ ಬೀದರ್ ಜಿಲ್ಲೆಯ ಮಿರ್ಜಾಪುರ ಮಳೇಗಾಂವ್ ರಸ್ತೆ ಸೇರಿದಂತೆ ಹಲವು ರಸ್ತೆಗಳ ನಿರ್ವಹಣೆ ಕಾಮಗಾರಿಗಳಲ್ಲಿ ಗುಂಡಿ ಮುಚ್ಚುವ ಕೆಲಸವನ್ನು ನಿರ್ವಹಿಸದೆ ಹಣವನ್ನು ಪಡೆದುಕೊಂಡು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಈ ಕಾಮಗಾರಿಗಳಿಗೆ ಬಿಡುಗಡೆಯಾದ ಹಣವೆಷ್ಟು ; ಈ ಕಾಮಗಾರಿಗಳನ್ನು ನಿರ್ವಹಿಸದ ಗುತ್ತಿಗೆದಾರರ ಸಂಪೂರ್ಣ ವಿವರ ನೀಡುವುದು ;

(ಈ) ಬೀದರ್‌ನ ಹಪ್ಸಿಕೋಟ್‌ನಲ್ಲಿರುವ ಅತಿಥಿಗೃಹ, ಅಂಬೇಡ್ಕರ್ ವೃತ್ತದಲ್ಲಿನ ಪ್ರವಾಸಿ ಮಂದಿರ, ಲೋಕೋಪಯೋಗಿ ಇಲಾಖೆ, ಕಛೇರಿ ಹಾಗೂ ವಸತಿ ಗೃಹ ಮತ್ತು ಆರ್.ಹೆಚ್.ಎಸ್. ವಸತಿ ಗೃಹಗಳ ದುರಸ್ಥಿಯಲ್ಲಿ ನಡೆದಿರುವ ಅಕ್ರಮಗಳ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

(ಉ) ೨೦೧೫–೧೬ನೇ ಸಾಲಿನ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹಾಗೂ ಅವರು ನಮೂದಿಸಿದ ದರಗಳ ಹಾಗೂ ಕಾಮಗಾರಿಗಳು ಯಾವುವು ? (ಗುತ್ತಿಗೆದಾರರ ವಿವರ ಒದಗಿಸುವುದು)

## ಹೆದ್ದಾರಿಗಳಲ್ಲಿ ಅಪಘಾತದ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೯ (೯೨೧) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ವೇಳೆ ವಾಹನಗಳ ವೇಗದ ರಭಸಕ್ಕೆ ನಾಯಿ, ಎಮ್ಮೆ, ಆಕಳು, ಕುದುರೆ, ಇತ್ಯಾದಿ ಪ್ರಾಣಿಗಳು ಅಪಘಾತದಿಂದಾಗಿ ಮೃತಪಟ್ಟ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ತೆಗೆದುಕೊಂಡಿದೆ ;

(ಆ) ಮೃತಪಟ್ಟ ಪ್ರಾಣಿಗಳನ್ನು ರಸ್ತೆಯ ಬದಿಗೆ ತೆಗೆದು ಹಾಕುವ ಜವಾಬ್ದಾರಿಯನ್ನು ಯಾವ ಇಲಾಖೆಗೆ ವಹಿಸಲಾಗಿದೆ ; (ವಿವರ ನೀಡುವುದು)

(ಇ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ವೇಳೆ ಪೆಟ್ರೋಲಿಂಗ್ ವ್ಯವಸ್ಥೆ (ಗಸ್ತು)ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ? (ಸಂಪೂರ್ಣ ವಿವರ ನೀಡುವುದು)

## ರಾಯಚೂರು ಜಿಲ್ಲೆಗೆ ಮಂಜೂರಾಗಿರುವ 'ಕೃಷಿಹೊಂಡ'ಗಳ ಬಗ್ಗೆ

**ಶ್ರೀ ಎಸ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೦ (೯೮೮) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೬--೧೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಮಂಜೂರಾದ 'ಕೃಷಿ ಹೊಂಡ'ಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ೨೦೧೭--ಮಾರ್ಚ್ ಒಳಗಾಗಿ ಇನ್ನೂ ಎಷ್ಟು 'ಕೃಷಿ ಹೊಂಡ'ಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ?

## ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಅರೆಕಾಲಿಕ ಸಿಬ್ಬಂದಿಯನ್ನು ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೧೧೧ (೧೦೧೭) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ಕೃಷಿ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು ;

(ಆ) ಈ ವಿಶ್ವವಿದ್ಯಾಲಯಗಳಲ್ಲಿ ಗುತ್ತಿಗೆ, ಸಂಚಿತ ವೇತನ, ಹೊರಗುತ್ತಿಗೆ ಹಾಗೂ ಇತರೆ ವಿಧಾನಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ವಿಶ್ವವಿದ್ಯಾಲಯವಾರು ಮಾಹಿತಿ ನೀಡುವುದು)

(ಇ) ಈ ಸಿಬ್ಬಂದಿಗಳು ಎಷ್ಟು ವರ್ಷಗಳಿಂದ ಈ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ ; (ವಿವರವಾದ ಮಾಹಿತಿ ನೀಡುವುದು)

(ಈ) ಇವರನ್ನು ಸಂಬಂಧಿಸಿದ ಕೃಷಿ ವಿಶ್ವವಿದ್ಯಾಲಯಗಳ ಸೇವೆಯಲ್ಲಿ ವಿಲೀನಗೊಳಿಸಲು ಉದ್ದೇಶಿಸಲಾಗಿದೆಯೇ ;

(ಉ) ಈಗಾಗಲೇ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಗಳನ್ನು ರೂಪಿಸಿ, ವಿಲೀನಗೊಳಿಸಿದಂತೆ ಸದರಿ ಸಿಬ್ಬಂದಿಗಳನ್ನು ವಿಲೀನಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು ?

## ರಾಜ್ಯದ ತೋಟಗಾರಿಕಾ ಫಾರಂಗಳ ಕುರಿತು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೨ (೧೦೨೦) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನೂರಾರು ಎಕರೆ ತೋಟಗಾರಿಕಾ ಫಾರಂಗಳ ಸಂರಕ್ಷಣೆ, ಇಲಾಖೆಗೆ ಒದಗಿಸುವ ಬಜೆಟ್ ಅನುದಾನದ ಸಮರ್ಪಕ ಬಳಕೆಗಾಗಿ ವಿಭಾಗೀಯ ಮಟ್ಟದಲ್ಲಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ತೀರ್ಮಾನಿಸಿದೆಯೇ ;

(ಆ) ಹೌದಾದರೆ, ರಾಜ್ಯದಲ್ಲಿ ಎಲ್ಲೆಲ್ಲಿ ವಿಭಾಗೀಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ;

(ಇ) ವಿಭಾಗೀಯ ಕೇಂದ್ರದಲ್ಲಿನ ಸಿಬ್ಬಂದಿ ಮತ್ತು ಅಧಿಕಾರಿಗಳ ವಿವರ ನೀಡುವುದು ;

(ಈ) ಕೇಂದ್ರ ಸ್ಥಾಪನೆ ಅನುದಾನ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಸೋಲಾರ್ ವಿದ್ಯುತ್ ಘಟಕಗಳ ಸ್ಥಾಪನೆ ಕುರಿತು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೧೩ (೯೬೮+೯೬೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಲ್ಲಿ ರಾಜ್ಯದಲ್ಲಿ ಸೋಲಾರ್ ವಿದ್ಯುತ್ ಘಟಕಗಳ ಸ್ಥಾಪನೆಗೆ ಕೈಗೊಂಡಿರುವ ಕ್ರಮಗಳೇನು ; (ಸಣ್ಣ, ಮಧ್ಯಮ, ಬೃಹತ್ ಯೋಜನೆಗಳ ವಿವರ ನೀಡುವುದು)

(ಆ) ಬೃಹತ್ ಸೋಲಾರ್ ವಿದ್ಯುತ್ ಯೋಜನೆ ಕೈಗೊಂಡಿರುವ ಕಂಪನಿಗಳ ಹೆಸರು, ವ್ಯಕ್ತಿಗಳು, ವಿದ್ಯುತ್ ತಯಾರಿಕೆಯ ಪ್ರಮಾಣ ; ವಿದ್ಯುತ್ ತಯಾರಿಕೆಯ ಆರಂಭ ; ಪ್ರತಿ ಯೂನಿಟ್‌ಗೆ ಸರ್ಕಾರ ನಿಗದಿಪಡಿಸಿರುವ ದರವೇನು ; ಸರ್ಕಾರದಿಂದ ಕೊಡುತ್ತಿರುವ ಪ್ರೋತ್ಸಾಹವೇನು ? (ಮಾಹಿತಿಯನ್ನು ಸಂಪೂರ್ಣ ವಿವರಣೆಯೊಂದಿಗೆ ನೀಡುವುದು)

**ಕೃಷಿ ಉತ್ಪನ್ನ ಮಾರುಕಟ್ಟೆ ಸೆಸ್ ಶೇ. ೧.೫ ಆವರ್ತಕ ನಿಧಿ ಬಗ್ಗೆ**

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೧೧೪ (೧೦೦೪) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಮಾರುಕಟ್ಟೆ ಸೆಸ್ ಶೇ. ೧.೫ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದರೆ, ಶೇ. ೧.೫ ಮಾರುಕಟ್ಟೆ ಸೆಸ್ ಹಾಕುವ ಉದ್ದೇಶಗಳೇನು ಹಾಗೂ ಶೇ. ೧.೫ ಯಾವ ಯಾವ ಬಾಬ್ತುಗಳಿಂದ ಕೂಡಿದೆ ; (ಪ್ರತ್ಯೇಕ ಸವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಶೇ. ೧.೫ ಸೆಸ್‌ನಲ್ಲಿ ಶೇ. ೦.೫ ಆವರ್ತ ನಿಧಿಗಾಗಿ (Reserve Fund) ಸಂಗ್ರಹಿಸಲಾಗುತ್ತಿದೆಯೇ ; ಹಾಗಿದ್ದರೆ, ನಿಧಿ ಸಂಗ್ರಹದ ಗುರಿ ಎಷ್ಟು ; ಇಲ್ಲಿಯವರೆಗೆ ಸಂಗ್ರಹವಾದ ಆವರ್ತ ನಿಧಿ (Reserve Fund) ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಆವರ್ತ ನಿಧಿ ಗುರಿದಾಟಿ ಎರಡರಿಂದ ಮೂರು ಪಟ್ಟು ಸಂಗ್ರಹವಾದರೂ ಇನ್ನೂ ಕೂಡ ಈ ಸೆಸ್ ಜಾರಿಯಲ್ಲಿರುವ ವಿಚಾರ ಹಾಗೂ ನೆರೆ ರಾಜ್ಯಗಳಲ್ಲಿ ಮಾರುಕಟ್ಟೆ ಸೆಸ್ ಕಡಿಮೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಬಂದಿದ್ದರೆ, ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ಶೇ. ೧.೫ ಮಾರುಕಟ್ಟೆ ಸೆಸ್ ಹೆಚ್ಚಿದ್ದು, ವಿಶೇಷವಾಗಿ ಗಡಿ ಜಿಲ್ಲೆಗಳಿಂದ ನೆರೆ ರಾಜ್ಯಗಳಿಗೆ ಕೃಷಿ ಉತ್ಪನ್ನ ವ್ಯಾಪಾರ ವಹಿವಾಟು ನೆರೆ ರಾಜ್ಯಗಳಿಗೆ ಹೋಗುತ್ತಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ಮಾರುಕಟ್ಟೆ ಸೆಸ್ ಶೇ. ೧ಕ್ಕೆ ಇಳಿಸಲು ಮುಂದಾಗುವುದೇ ; ಇದ್ದರೆ, ಸರ್ಕಾರದ ಮುಂದಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಅಮೃತ್ ಮಹಲ್‌ಗಳ ವಿವರ ನೀಡುವ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫ (೯೭೩) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಇರುವ ಅಮೃತ್ ಮಹಲ್‌ಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಅಮೃತ್ ಮಹಲ್‌ಗಳಲ್ಲಿರುವ ರಾಸುಗಳಿಗೆ ಮೇವಿನ ಸೌಲಭ್ಯ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿರುವ ವಿವರ ನೀಡುವುದು ;

(ಇ) ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಅಮೃತ್ ಮಹಲ್‌ನಲ್ಲಿ ಇರುವ ರಾಸುಗಳೆಷ್ಟು ; ಸದರಿ ರಾಸುಗಳಿಗೆ ಕುಡಿಯುವ ನೀರಿನ ಸೌಕರ್ಯ ಮತ್ತು ಮೇವಿನ ವ್ಯವಸ್ಥೆ ಮಾಡಲಾಗಿದೆಯೇ ? (ವಿವರ ನೀಡುವುದು)

## ತೆಂಗಿನ ಮರಗಳಿಗೆ ಬಿಳಿ ಹುಳುಗಳ ಹಾವಳಿ ಬಗ್ಗೆ

**ಶ್ರೀ ಕಾಂತರಾಜು (ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೬ (೯೧೧) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಪವೃಕ್ಷದ ತವರೂರು ತುಮಕೂರು ಜಿಲ್ಲೆಯಾದ್ಯಂತ ಇರುವ ತೆಂಗಿನ ಮರಗಳಿಗೆ ಬಿಳಿ ಹುಳುಗಳ ಹಾವಳಿಯಿಂದ ನೂರಾರು ಮರಗಳು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ದಿನದಿಂದ ದಿನಕ್ಕೆ ಸಾಂಕ್ರಾಮಿಕ ರೋಗದ ರೀತಿ ತೋಟದಿಂದ ತೋಟಕ್ಕೆ ಹರಡುತ್ತಿರುವ ರೋಗದ ಹತೋಟಿಗೆ ಸರ್ಕಾರ ಮತ್ತು ಸಂಬಂಧಿಸಿದ ಇಲಾಖೆ ತೆಗೆದುಕೊಂಡಿರುವ ಮಾರ್ಗೋಪಾಯಗಳೇನು ; (ವಿವರ ನೀಡುವುದು)

(ಇ) ತೆಂಗಿನ ಮರಗಳಿಗೆ ಬಿಳಿ ಹುಳುಗಳು ಬಿದ್ದಿರುವುದರಿಂದ, ರೈತನ ನೆಮ್ಮದಿಗೆ ಸಂಚಕಾರ ಬಂದಿರುವುದರಿಂದ, ರೈತರಿಗೆ ಉಚಿತವಾಗಿ ಔಷದೋಪಚಾರವನ್ನು ಸರ್ಕಾರ ಒದಗಿಸುವುದೆ ?

## ಪಶು ವೈದ್ಯಕೀಯ ಆಸ್ಪತ್ರೆಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೭ (೧೦೪೪) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆಯಾದ್ಯಂತ ಇರುವ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ತಜ್ಞ ಪಶುವೈದ್ಯರ ಸಂಖ್ಯೆ ಎಷ್ಟು ;

(ಇ) ೨೦೧೬–೨೦೧೭ನೇ ಸಾಲಿನಲ್ಲಿ ಹೊಸದಾಗಿ ಪಶು ವೈದ್ಯಕೀಯ ಆಸ್ಪತ್ರೆಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

## ಘನ ತ್ಯಾಜ್ಯ ನಿರ್ವಹಣೆ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೮ (೧೦೧೩) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವೈಜ್ಞಾನಿಕವಾಗಿ ಘನ ತ್ಯಾಜ್ಯ ನಿರ್ವಹಣೆಯನ್ನು ಮಾಡಲಾಗುತ್ತಿದೆಯೇ ;

(ಆ) ಇನ್ನು ಹಲವಾರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು ಮಾಡದೆ ಎಲ್ಲೆಂದರಲ್ಲಿ ಸುರಿಯುತ್ತಿರುವುದು ಸರ್ಕಾರದ

ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

(ಇ) ಹಲವು ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ನಿರ್ವಹಣೆ ಘಟಕಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ಘನ ತ್ಯಾಜ್ಯ ನಿರ್ವಹಣೆಗೆ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ; ಖರ್ಚಾದ ಅನುದಾನವೆಷ್ಟು ? (ವಿವರ ನೀಡುವುದು)

## ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಖಾಲಿ ಹುದ್ದೆ ಭರ್ತಿ ಮಾಡುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯ (೯೩೩) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಮಂಜೂರಾದ/ಕಾರ್ಯನಿರ್ವಹಿಸುತ್ತಿರುವ/ಖಾಲಿ ಹುದ್ದೆಗಳು ಎಷ್ಟು ; (ಮಾಹಿತಿ ನೀಡುವುದು)

(ಆ) ಕೊಡಗು ಜಿಲ್ಲೆಯಲ್ಲಿನ ನಗರ ಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು ; ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ವಹಿಸಲಾಗಿದೆ ; (ವಿವರ ನೀಡುವುದು)

(ಇ) ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿದ್ದಲ್ಲಿ ನಗರ ಹಾಗೂ ಪಟ್ಟಣಗಳ ಕಾಮಗಾರಿಗಳ ಅನುಷ್ಠಾನ, ಅಭಿವೃದ್ಧಿಯನ್ನು ಯಾವ ರೀತಿ ಮಾಡಲು ಸರ್ಕಾರ ಚಿಂತನೆ ನಡೆಸಿದೆ ? (ಮಾಹಿತಿ ನೀಡುವುದು)

## ಪುರಸಭಾ ವ್ಯಾಪ್ತಿಯಲ್ಲಿ ಮನೆ ಕಂದಾಯದ ಬಗ್ಗೆ

**ಡಾ. ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦ (೧೦೦೬) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕಿನ ಪುರಸಭಾ ವ್ಯಾಪ್ತಿಯಲ್ಲಿ ಮನೆ ಕಂದಾಯದ ಮೊತ್ತವನ್ನು ಸರ್ಕಾರ ನಿಗದಿಪಡಿಸಿದೆಯೇ ;

(ಆ) ಹಾಗಿದ್ದಲ್ಲಿ, ಒಂದು ಮನೆಗೆ ಎಷ್ಟು ಕಂದಾಯದ ಮೊತ್ತವನ್ನು ನಿಗದಿಪಡಿಸಲಾಗಿದೆ ;

(ಇ) ಪುರಸಭಾ ಅಧಿಕಾರಿಗಳು ಸರ್ಕಾರ ನಿಗದಿಪಡಿಸಿರುವ ಕಂದಾಯದ ಮೊತ್ತಕ್ಕಿಂತ ಹೆಚ್ಚಿನ ಕಂದಾಯವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಸರ್ಕಾರ ನಿಗದಿಪಡಿಸಿರುವ ಕಂದಾಯಕ್ಕಿಂತ ಪುರಸಭೆಯು ಹೆಚ್ಚಿನ ದಂಡ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ದಂಡ ಸಹಿತ ಕಂದಾಯದ ಮೊತ್ತವನ್ನು ವಸೂಲಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ;

(ಊ) ಹಾಗಿದ್ದಲ್ಲಿ, ತಕ್ಷಣದಿಂದಲೇ ಜಾರಿಗೆ ಬರುವಂತೆ ಸರ್ಕಾರ ಆದೇಶವನ್ನು ಹೊರಡಿಸುವುದೆ ?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 1120 – ಪಿ5